
# 5 DAY- EDUCATIONAL TOUR 2019-20

**02nd to 08-Feb-2020**












"ದೇಶ ಸುತ್ತಿ ಕೋಶ ಓದು" ಎಂಬುದು ಬಲ್ಲವರ ಮಾತಾಗಿದ್ದು ಸಮಸ್ತ ದಕ್ಷಿಣ ಭಾರತದಲ್ಲಿ ನೂರಾರು ಐತಿಹಾಸಿಕ ಸ್ಥಳಗಳು ಮತ್ತು ತೀರ್ಥಕ್ಷೇತ್ರಗಳನ್ನು ನಾವು ಕಾಣಬಹುದು. ಇದೊಂದು ಪುಣ್ಯಭೂಮಿ, ಪವಿತ್ರ ನಾಡು. ಈ ನಮ್ಮ ದಕ್ಷಿಣ ಭಾರತದ ಹಲವಾರು ರಾಜ್ಯಗಳಲ್ಲಿ ಪುಣ್ಯಪ್ರದವಾದ ಮಹಾ ವ್ಯಕ್ತಿಗಳು ಜನ್ಮವೆತ್ತಿದ್ದಾರೆ ಹಾಗೂ ಈ ದೇಶದ ನೆಲವನ್ನು ಪುಣ್ಯಭೂಮಿಯನ್ನಾಗಿ ಪರಿವರ್ತಿಸಿದ್ದಾರೆ.

ಶೈಕ್ಷಣಿಕ ಪ್ರವಾಸವು ವಿದ್ಯಾರ್ಥಿಗಳಲ್ಲಿ ಯಾವಾಗಲೂ ವಿಸ್ಮಯಗೊಳ್ಳುವಂತದ್ದಾಗಿರುತ್ತದೆ. ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದಲ್ಲಿ ಪ್ರವಾಸವು ಒಂದು ಮುಖ್ಯವಾದ, ಅವಿಸ್ಮರಣೀಯವಾದ ಹಾಗೂ ಯಾವಾಗಲೂ ನೆನಪು ಮಾಡಿಕೊಳ್ಳುವಂತಹ ಸಂಗತಿಯಾಗಿರುತ್ತದೆ ಕಾರಣ ಶೈಕ್ಷಣಿಕ ಪ್ರವಾಸವು ವಿದ್ಯಾರ್ಥಿಗಳಿಗೆ ಕಲಿಯುವುದಕ್ಕೆ ಅನೌಪಚಾರಿಕ ವಾತಾವರಣವು ದೀರ್ಘಕಾಲ ಉಳಿಯುವಂತೆ ಒಂದು ಒಳ್ಳೆಯ ಅವಕಾಶವನ್ನು ಒದಗಿಸುತ್ತದೆ. ಶೈಕ್ಷಣಿಕ ಪ್ರವಾಸವು ವಿದ್ಯಾರ್ಥಿಗಳಲ್ಲಿ ಬೌದ್ಧಿಕ ಶಕ್ತಿಯನ್ನು, ಅನುಭವವನ್ನು, ಸಂಸ್ಕೃತಿಯನ್ನು, ಸ್ಥಳಗಳ ಮಾಹಿತಿಯನ್ನು, ಐತಿಹಾಸಿಕ ಸ್ಥಳಗಳ ಇತಿಹಾಸವನ್ನು, ಐತಿಹ್ಯಗಳನ್ನು ಮತ್ತು ಭೌಗೋಳಿಕ ಬುದ್ಧಿಯನ್ನು ಬೆಳೆಸಿಕೊಳ್ಳಲು ಇದು ತುಂಬಾನೇ ಸಹಕಾರಿಯಾಗಿದೆ.

**ಶೈಕ್ಷಣಿಕ ಪ್ರವಾಸದ ಪ್ರಯೋಜನಗಳು**

1. **ಅಡಿಪಾಯ:** ಈ ಶೈಕ್ಷಣಿಕ ಪ್ರವಾಸವು ವಿದ್ಯಾರ್ಥಿಗಳಲ್ಲಿ ಕಲಿಯುವ ಅನುಭವವನ್ನು ಬೆಳವಣಿಗೆಗೊಳಿಸಲು ತಳಹದಿ ಆಗಿರುತ್ತದೆ. ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳಿಬ್ಬರಲ್ಲಿ ಒಳ್ಳೆಯ ಸಂಬಂಧಗಳನ್ನು ಸೃಷ್ಟಿಸುತ್ತದೆ.
2. **ಉತ್ತಮ ಭರವಸೆ ಒಪ್ಪಂದ:** ಅಧ್ಯಾಪಕರಿಂದ ಸರಿಯಾದ ಮಾರ್ಗದರ್ಶನ ಹಾಗೂ ಸಹಾಯ ಮಾಡುವುದರ ಜೊತೆಗೆ ಶೈಕ್ಷಣಿಕ ಪ್ರವಾಸವು ಒಂದು ಸುಲಭವಾಗಿ ಚಲಿಸುವ ಒಂದು ತರಗತಿಯಾಗಿ ಮಾರ್ಪಾಡಾಗಿರುತ್ತದೆ ಹಾಗೂ ವಿದ್ಯಾರ್ಥಿಗಳಲ್ಲಿ ಕಲಿಯುವ ಸಾಮಾರ್ಥ್ಯ, ಆರೋಗ್ಯಕರ ತಮಾಷೆ (ವಿನೋದ) ಮತ್ತು ಚರ್ಚೆಗಳು ನಡೆಯುತ್ತದೆ.
3. **ಸಮಾಜಿಕರಣವಾಗಿರುತ್ತದೆ:** ಹೊಸದಾಗಿ ಕಲಿಯುವ ವಿದ್ಯಾರ್ಥಿಗಳಿಗೆ ಜನರ ಜೊತೆ ಪರಸ್ಪರ ಮಾತಾಡಲು ಮತ್ತು ಸಾಮಾಜಿಕತೆಯ, ಸಾಮಾರ್ಥ್ಯವನ್ನು, ಜೀವನವನ್ನು ತಿಳಿದು ನಡೆಯಲು ಇದು ಸಹಕಾರಿಯಾಗಿದೆ.
4. **ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ:** ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಪ್ರವಾಸದ ನೆನಪುಗಳನ್ನು ದೀರ್ಘಕಾಲ ಹಿಡಿದಿಟ್ಟುಕೊಳ್ಳಲು ಮತ್ತು ಹೆಚ್ಚು ನಿರೀಕ್ಷಿಸಿ ಪರಿಣಾಮಕಾರಿಯಾಗಿ ಗಳಿಸಿದ ಜ್ಞಾನವನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾಗುತ್ತದೆ. ಜೊತೆಗೆ ವಿದ್ಯಾರ್ಥಿಗಳಲ್ಲಿ ಹೊಸದಾಗಿ ಪತ್ತೆಹಚ್ಚುವಂತಹ ಮತ್ತು ಹೊಸ ಕಲ್ಪನೆಯನ್ನು (ಬದಲಾವಣೆಯನ್ನು) ಕಲಿಯುವ ಸಾಮರ್ಥ್ಯವನ್ನು ಹಿಡಿದಿಟ್ಟುಕೊಳ್ಳಲು ಈ ಶೈಕ್ಷಣಿಕ ಪ್ರವಾಸವು ತುಂಬಾನೇ ಸಹಕಾರಿಯಾಗಿದೆ.

ನಾವು ನಮ್ಮ ಕಾಲೇಜಿನ ಬಿ.ಕಾಂ, ಬಿಬಿಎ ಹಾಗೂ ಬಿಎ ವಿಭಾಗಗಳಿಂದ 2019–20ನೇ ಸಾಲಿಗೆ ಶೈಕ್ಷಣಿಕ ಪ್ರವಾಸವನ್ನು ದಿನಾಂಕ:02.02.2020ರ ರಾತ್ರಿ 10.30 ರಿಂದ 08.02.2020ರ ಬೆಳಿಗ್ಗೆ 6.30ರವರೆಗೆ ಒಟ್ಟು 5 ದಿನಗಳ ಪ್ರವಾಸವನ್ನು 50 ಜನ ವಿದ್ಯಾರ್ಥಿಗಳೊಡನೆ ಹಾಗೂ 3 ಅಧ್ಯಾಪಕರೊಡನೆ ಕೈಗೊಂಡಿದ್ದೆವು. ನಮ್ಮ ಪ್ರವಾಸವು ಚಿತ್ರದುರ್ಗದಿಂದ ಪ್ರಾರಂಭವಾಗಿ ತುಂಗಭದ್ರ ಡ್ಯಾಂ, ಹಂಪಿ, ಕೂಡಲಸಂಗಮ, ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಬಾದಾಮಿ, ಬನಶಂಕರಿ ದೇವಸ್ಥಾನ, ಗೋವಾ (2 ದಿನಗಳು), ಕಾರವಾರದ ಕಡಲ ತೀರ, ಮುರ್ಡೇಶ್ವರ, ಕುಂಭಾಶಿ ದುರ್ಗಾಪರಮೇಶ್ವರಿ ದೇವಸ್ಥಾನ, ಆನೆಗುಡ್ಡೆ ಮಹಾಗಣಪತಿ ದೇವಸ್ಥಾನ, ಮಲ್ಪೆ ಕಡಲ ತೀರ ಮತ್ತು ಉಡುಪಿ ಶ್ರೀಕೃಷ್ಣನ ದೇವಸ್ಥಾನಕ್ಕೆ ಭೇಟಿ ನೀಡಿ ಮೈಸೂರಿನಲ್ಲಿ ಪ್ರವಾಸವನ್ನು ಅಂತ್ಯಗೊಳಿಸಿದೆವು.

**ಶೈಕ್ಷಣಿಕ ಪ್ರವಾಸದ ಐದು ದಿನಗಳಲ್ಲಿ ಭೇಟಿನೀಡಿದ ಸ್ಥಳಗಳ ವಿವರ ಕೆಳಕಂಡಂತಿರುತ್ತದೆ;**

ಪ್ರವಾಸವು ದಿನಾಂಕ:02.02.2020ರ ಭಾನುವಾರ ರಾತ್ರಿ 10.30ಕ್ಕೆ "ಎಸ್.ಬಿ.ಎಂ.ಎಸ್ ಟೂರ್ಸ್ ಅಂಡ್ ಟ್ರಾವಲ್ಸ್ ಪ್ಯಾಕೇಜಸ್" ಅವರ ಬಸ್‌ನಲ್ಲಿ ಕಾಲೇಜಿನಿಂದ ಹೊರಡುವ ಮೂಲಕ ಪ್ರಾರಂಭ ಮಾಡಿದೆವು. ಪ್ರವಾಸದ ಮೊದಲನೇ ದಿನ ದಿನಾಂಕ:03.02.2020ರ ಸೋಮವಾರ ಬೆಳಿಗ್ಗೆ 5.30ಕ್ಕೆ ಚಿತ್ರದುರ್ಗದ ಶ್ರೀ ಶರಣ ಮುರುಘಾ ಮಠದ ಆವರಣವನ್ನು ತಲುಪಿದೆವು. ಮಠದಲ್ಲಿ ಶುಚಿರ್ಭೂತರಾಗಿ ಚಿತ್ರದುರ್ಗದ ಕಲ್ಲಿನ ಕೋಟೆಗೆ ಭೇಟಿ ನೀಡಲು ಹೊರಟೆವು. ಕೋಟೆ ಆವರಣವನ್ನು ಬೆಳಿಗ್ಗೆ 7.20ಕ್ಕೆ ತಲುಪಿದೆವು. ಚಿತ್ರದುರ್ಗದ ಕಲ್ಲಿನ ಕೋಟೆಯು ಹದಿನೆಂಟನೇ ಶತಮಾನಕ್ಕೆ ಸೇರಿದ್ದಾಗಿದ್ದು ಗ್ರಾನೈಟ್ ಅಥವಾ ಖನಿಜ ಕಲ್ಲಿನಲ್ಲಿ ವಿಸ್ತಾರವಾಗಿ ಕಟ್ಟಲಾಗಿದೆ. ಕೋಟೆಯ ಒಳಾಂಗಣದಲ್ಲಿ ಶ್ರೀಏಕನಾಥೇಶ್ವರಿ ದೇವಸ್ಥಾನ, ಶ್ರೀಹಿಂಡಂಭೇಶ್ವರ ದೇವಸ್ಥಾನ, ಹಳೆಯ ಮುರುಘಾಮಠ, ಸಂಪಿಗೆ ಸಿದ್ಧೇಶ್ವರ ದೇವಸ್ಥಾನ, ತುಪ್ಪದ ಕೊಳ, ಠಂಕಶಾಲೆ, ಅಕ್ಕ ತಂಗಿಯರ ಹೊಂಡ, ಓಬವ್ವನ ಕಿಂಡಿ ಸ್ಥಳಗಳನ್ನು ನೋಡಿ ವಿದ್ಯಾರ್ಥಿಗಳಿಗೆ ವಿವರಣೆಯನ್ನು ನೀಡಲಾಯಿತು.

ಕಲ್ಲಿನ ಕೋಟೆಯನ್ನು ವೀಕ್ಷಿಸಿದ ನಂತರ ನಮ್ಮ ಪ್ರಯಾಣ ಮತ್ತೆ ಮರುಘಾ ಮಠದ ಆವರಣದ ಕಡೆಗೆ. ಮರುಘಾ ಮಠಕ್ಕೆ ಭೇಟಿ ನೀಡಿ ಅಲ್ಲಿಯೇ ಬೆಳಗ್ಗಿನ ಉಪಹಾರವನ್ನು ಸೇವಿಸಿದೆವು. ತದನಂತರ ಅಲ್ಲಿಂದ ಹೊಸಪೇಟೆಯ ತುಂಗಭದ್ರ ಅಣೆಕಟ್ಟನ್ನು ವೀಕ್ಷಿಸಲು 10.30ಕ್ಕೆ ಹೊರಟೆವು. ರಾಷ್ಟ್ರೀಯ ಹೆದ್ದಾರಿ 50ರ ಮೂಲಕ ಸುಮಾರು 3 ಘಂಟೆಗಳ ಅವಧಿಯ ಪ್ರಯಾಣದ ನಂತರ ಹೊಸಪೇಟೆಯನ್ನು ತಲುಪಿದೆವು. ಹೊಸಪೇಟೆಯಲ್ಲಿನ ತುಂಗಭದ್ರ ಅಣೆಕಟ್ಟು ಅಥವಾ ಟಿಬಿ ಡ್ಯಾಂ 225.55ಮೀ ಎತ್ತರವಿದ್ದು ಸ್ವಾತಂತ್ರ್ಯ ಭಾರತದ ಎರಡನೇ ಅತಿದೊಡ್ಡ ಅಣೆಕಟ್ಟು ಎಂದೇ ಪ್ರಸಿದ್ಧಿಯಾಗಿತ್ತು. ತುಂಗಭದ್ರಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಈ ಅಣೆಕಟ್ಟು ಕರ್ನಾಟಕ ಹಾಗೂ ಆಂಧ್ರಪ್ರದೇಶ ರಾಜ್ಯಗಳಿಗೆ ನೀರಾವರಿ, ಕಿರು ಜಲವಿದ್ಯುತ್ ಮತ್ತು ಕುಡಿಯುವ ನೀರಿನ ಉದ್ದೇಶದಿಂದ 1953ರಲ್ಲಿ ಕಟ್ಟಲಾಗಿದೆ. ಅಣೆಕಟ್ಟನ್ನು ನೋಡಿ ವಿದ್ಯಾರ್ಥಿಗಳು ತುಂಬಾ ಖುಷಿಪಟ್ಟರು ಹಾಗೂ ನಮ್ಮದೇ ಆದ ಕೃಷ್ಣರಾಜಸಾಗರ ಜಲಾಶಯಕ್ಕೆ ತಾಳೆ ಹಾಕಿದರು. ಜಲಾಶಯವನ್ನು ವೀಕ್ಷಿಸಿದ ನಂತರ ಮಧ್ಯಾಹ್ನದ ಊಟವನ್ನು ಮುಗಿಸಿ ಹಂಪಿಯ ಕಡೆ ನಮ್ಮ ಪ್ರಯಾಣವನ್ನು ಮುಂದುವರೆಸಿದೆವು.

ವಿಜಯನಗರ ಮಹಾಸಂಸ್ಥಾನದ ರಾಜಧಾನಿಯಾಗಿದ್ದ ಹಂಪಿಯನ್ನು ಮಧ್ಯಾಹ್ನ 2.00 ಗಂಟೆಗೆ ತಲುಪಿದೆವು. ವಿಜಯನಗರ ಸಂಸ್ಥಾನವು ಒಂದನೇ ಬುಕ್ಕರಾಯ, ಹರಿಹರ, ಹಕ್ಕ ಮತ್ತು ಬುಕ್ಕರ ಶ್ರಮದ ಫಲವಾಗಿ ಹುಟ್ಟಿಕೊಂಡಿತು. ವಿಜಯನಗರ ಸಾಮ್ರಾಜ್ಯದ ಕೀರ್ತಿ ಪತಾಕೆಯನ್ನು ಶ್ರೀಕೃಷ್ಣದೇವರಾಯರು ಎತ್ತಿಹಿಡಿದಿದ್ದಾರೆ. ಅಂದಿನ ಹಂಪಿಯಲ್ಲಿ ರಸ್ತೆಬದಿಯಲ್ಲಿಯೇ ಚಿನ್ನ, ಬೆಳ್ಳಿ, ವಜ್ರ, ವೈಢೂರ್ಯಗಳ ಮಾರಾಟವನ್ನು ಮಾಡಲಾಗುತ್ತಿತ್ತು ಎಂದು ಚೀನಾದ ಪ್ರತಿನಿಧಿಯಾದ ಶ್ರೀಹ್ಯೂಯಾನ್‌ತ್ಸಾಂಗ್‌ರವರು ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ. ಅಷ್ಟೊಂದು ವೈಭವೋಪೇತ ಸಾಮ್ರಾಜ್ಯವಾಗಿದ್ದ ವಿಜಯನಗರ ಸಾಮ್ರಾಜ್ಯವು ಶ್ರೀಕೃಷ್ಣದೇವರಾಯರ ನಂತರ ಒಳರಾಜಕಾರಣ ಹಾಗೂ ವಿದೇಶೀ ದಾಳಿಕೋರರಿಂದ ಹಾಳು ಹಂಪಿಯಾಗಿ ಉಳಿದುಕೊಂಡಿದೆ. ಇಂದು ಹಂಪಿಯನ್ನು ನೋಡಬೇಕೆಂದರೇ ಒಂದು ದಿನದಲ್ಲಿ ಸಾಧ್ಯವಿಲ್ಲ ಕಾರಣ ಅಲ್ಲಿನ ದೇವಸ್ಥಾನಗಳು, ಅರಮನೆಗಳ ಕುರುಹುಗಳ ಹಲವಾರು ಉತ್ಖನನಗಳ ಮೂಲಕ ಈಗಲೂ ದೊರಕುತ್ತಿರುವುದು ಅಂದಿನ ಸಾಮ್ರಾಜ್ಯದ ಮೇಲಿನ ಆಕ್ರಮಣಕ್ಕೆ ಸಾಕ್ಷಿಗಳಾಗಿವೆ.

ಹಂಪಿಯ ಮುಖ್ಯ ಆಕರ್ಷಣೆ ಎಂದರೆ ವಿಜಯವಿಠಲಸ್ವಾಮಿ ದೇವಸ್ಥಾನದ ಆವರಣದಲ್ಲಿರುವ ಕಲ್ಲಿನ ರಥ. ವಿಜಯವಿಠಲ ದೇವಸ್ಥಾನದಲ್ಲಿನ ಹಜ್ಜಾರದಲ್ಲಿದ್ದ ಕಲ್ಲುಕಂಬಗಳು ಸಂಗೀತ ಸ್ವರಗಳನ್ನು ಹೊರಹೊಮ್ಮಿಸುತ್ತಿದ್ದವಂತೆ ಆದರೆ ಇಂದು ಆ ಕಂಬಗಳೆಲ್ಲಾ ಹಾಳಾಗಿವೆ. ಇಲಿನ ಇನ್ನೊಂದು ಆಕರ್ಷಣೀಯ ಸ್ಥಳವೆದರೆ ವಿರೂಪಾಕ್ಷ ದೇವಸ್ಥಾನ. ಈ ದೇವಸ್ಥಾನದ ರಾಜಗೋಪುರವೇ 170 ಅಡಿ ಇದೆ. ಇಲ್ಲಿ ಭುವನೇಶ್ವರಿಯ ದೇವಸ್ಥಾನವೂ ಸಹ ಇದ್ದು ದೇವಾಲಯದ ಮೇಲಿರುವ ದರ್ಪಣಗೂಡಿನ ಮೂಲಕ ರಾಜಗೋಪುರದ ನೆರಳು ಗೋಡೆಯ ಮೇಲೆ ತಲೆಕೆಳಗಾಗಿ ಕಾಣಿಸುತ್ತದೆ. ದೇವಸ್ಥಾನದ ಆವರಣದಲ್ಲಿ ಹಲವಾರು ಶಿಲ್ಪಗಳಿದ್ದು ಇದರಲ್ಲಿ

ಮುಖ್ಯವಾದದ್ದು 3 ತಲೆಯ ನಂದಿ ವಿಗ್ರಹಗಳು. ಹಂಪಿಯಲ್ಲಿ ನೋಡಲು ಹಲವಾರು ಸ್ಥಳಗಳಿದ್ದು ಹಜಾರರಾಮ ದೇವಾಲಯ ಹಲವಾರು ವೈಶಿಷ್ಟ್ಯಗಳಿಂದ ಕೂಡಿದೆ. ಈ ದೇವಾಲಯದ ಗೋಡೆಗಳ ಮೇಲೆ ಶಿಲಾ ಪಟ್ಟಿಕೆ ಇದ್ದು ಅದರಲ್ಲಿ ಕುದುರೆ, ಆನೆ, ನೃತ್ಯಗಾತಿಯರು, ಸೈನಿಕರು ಕೆತ್ತಲ್ಪಟ್ಟಿದ್ದಾರೆ. ಹಂಪಿಯಲ್ಲಿ ನೋಡಿದ ಇತರೆ ಸ್ಥಳಗಳೆಂದರೆ ಶ್ರೀ ಕೋದಂಡರಾಮ ದೇವಾಲಯ, ಮಹಾನವಮಿ ದಿಬ್ಬ, ತುರ್ತು ಕಾಲುವೆ, ಉದ್ಧಾನ ವೀರಭದ್ರ, ಉಗ್ರ ನರಸಿಂಹನ ಏಕಶಿಲಾ ವಿಗ್ರಹ, ಎತ್ತರದ ಶಿವಲಿಂಗ, ಸಾಸಿವೆಕಾಳು ಗಣೇಶ, ಕಡಲೆಕಾಳು ಗಣೇಶ, ಕಮಲ ಮಹಲ್, ರಾಣಿಯ ಸ್ನಾನ ಗೃಹ, ಪುರಂದರ ಮಂಟಪ ಮುಂತಾದವು. ಒಟ್ಟಿನಲ್ಲಿ ಹಂಪಿಯು ಒಂದು ತೆರೆದ ವಸ್ತು ಸಂಗ್ರಹಾಲಯವೆಂದರೆ ತಪ್ಪಾಗಲಾರದು. ಹಂಪಿಯಲ್ಲಿ ಇನ್ನೂ ನೋಡಬೇಕಾದ ಹಲವಾರು ಸ್ಥಳಗಳಿದ್ದರೂ ಸಹ ಸಮಯದ ಅಭಾವದಿಂದ ರಾತ್ರಿ 7.30ಕ್ಕೆ ಊಟ ಮುಗಿಸಿ ಕೂಡಲ ಸಂಗಮದ ಕಡೆ ನಮ್ಮ ಪ್ರಯಾಣವು ಮುಂದುವರೆಯಿತು. ಕೂಡಲ ಸಂಗಮಕ್ಕೆ ರಾತ್ರಿ 10.30ಕ್ಕೆ ತಲುಪಿ ಅಲ್ಲಿಯೇ ಜೈನ ಯಾತ್ರಿ ನಿವಾಸದಲ್ಲಿ ರಾತ್ರಿ ತಂಗಿದೆವು.

ಪ್ರವಾಸದ ಎರಡನೇ ದಿನ ಅಂದರೆ ದಿನಾಂಕ:04.02.2020ರ ಮಂಗಳವಾರ ಬೆಳಿಗ್ಗೆ ಸ್ನಾನ ನಿತ್ಯಾದಿ ಕರ್ಮಗಳನ್ನು ಮುಗಿಸಿ ಕೂಡಲಸಂಗಮದ ಸಂಗಮೇಶ್ವರ ದೇವಾಲಯಕ್ಕೆ ಭೇಟಿ ನೀಡಿದೆವು. ಕೂಡಲ ಸಂಗಮವು ಬಾಗಲಕೋಟೆ ಜಿಲ್ಲೆಯಲ್ಲಿದ್ದು, ಕೃಷ್ಣಾ ಹಾಗೂ ಮಲಪ್ರಭಾ ನದಿಗಳ ಸಂಗಮ ಪ್ರದೇಶವಾಗಿದ್ದು 12ನೇ ಶತಮಾನದಲ್ಲಿ ಸಮಾನತೆಯ ಕ್ರಾಂತಿಯನ್ನು ಸಾರಿದ ಶ್ರೀಬಸವಣ್ಣನವರು ಶಿವನಲ್ಲಿ ಐಕ್ಯರಾದ ಸ್ಥಳವೆಂದು ಪರಿಗಣಿಸಲಾಗಿದೆ. ನದಿಯಲ್ಲಿ ನೀರಿನ ಹರಿವು ಕಡಿಮೆ ಇದ್ದುದರಿಂದ ದೋಣಿ ವಿಹಾರಕ್ಕೆ ಅನುಕೂಲವಾಗಿತ್ತು. ಐಕ್ಯ ಸ್ಥಳದ ಹೊರಾಂಗಣ ಗೋಡೆಯ ದುರಸ್ತಿ ಕಾರ್ಯ ಪ್ರಗತಿಯಲ್ಲಿದ್ದ ಕಾರಣ ಭೇಟಿ ನೀಡಲು ಸಾಧ್ಯವಾಗಲಿಲ್ಲ. ಕೂಡಲ ಸಂಗಮದಲ್ಲಿ ಬೆಳಗಿನ ಉಪಹಾರವನ್ನು ಸೇವಸಿ ಐಹೊಳೆಯ ಕಡೆ ಪ್ರಯಾಣಕ್ಕೆ ತಯಾರಾದೆವು.

ಐಹೊಳೆಯ ಮಾರ್ಗ ಮಧ್ಯೆ ಅಮೀನಘಡ ಗ್ರಾಮವಿದ್ದು ಈ ಗ್ರಾಮದಲ್ಲಿ ಕರದಂಟು ಸಿಹಿತಿನಿಸು ಪ್ರಖ್ಯಾತಿಗಳಿಸಿದೆ. ಈ ಕರದಂಟು ಸಿಹಿಯನ್ನು ವಿದ್ಯಾರ್ಥಿಗಳು ಸವಿದರು. ಐಹೊಳೆ ಗ್ರಾಮವು ಮಲಪ್ರಭಾ ನದಿಯ ದಂಡೆಯಲ್ಲಿದ್ದು ಗ್ರಾಮದೊಳಗೆ ಸುಮಾರು 70ಕ್ಕೂ ಹೆಚ್ಚು ದೇವಾಲಯಗಳಿದ್ದು ಎಲ್ಲಾ ದೆವಾಲಯಗಳು ಶಿಥಿಲಾವಸ್ಥೆಯಲ್ಲಿವೆ. ಇವುಗಳಲ್ಲಿ ಪ್ರಮುಖವಾಗಿ ದುರ್ಗಾ ದೇವಾಲಯ, ಲಾಡ್‌ಖಾನ್, ಕೊಂತಿಗುಡಿ, ಮೇಗುತಿ ಗುಡಿ ಉತ್ತಮ ಸ್ಥಿತಿಯಲ್ಲಿವೆ. ಐಹೊಳಯಲ್ಲಿನ ವಸ್ತು ಸಂಗ್ರಹಾಲವು ಪ್ರಮುಖ ಪ್ರೇಕ್ಷಣೀಯ ಸ್ಥಳಗಳಲ್ಲೊಂದಾಗಿದೆ. ವಸ್ತು ಸಂಗ್ರಹಾಲಯದಲ್ಲಿ ಐಹೊಳೆಯ ಸುತ್ತಮುತ್ತ ಉತ್ಖನನ ಸಮಯದಲ್ಲಿ ದೊರೆತಿರುವ ವಸ್ತುಗಳು, ವಿಗ್ರಹಗಳನ್ನು ಸಂಗ್ರಹಿಸಿಡಲಾಗಿದೆ. ಐಹೊಳೆಯನ್ನು ವೀಕ್ಷಿಸಿದ ನಂತರ ನಮ್ಮ ಪ್ರಯಾಣ ಪಟ್ಟದ ಕಲ್ಲು ಗ್ರಾಮದ ಕಡೆ. ಪಟ್ಟದ ಕಲ್ಲು ಸಹ ಮಲಪ್ರಭಾ ನದಿಯ ದಂಡೆಯಲ್ಲಿದ್ದು, ಚಾಲುಕ್ಯರ ಸಾಮ್ರಾಜ್ಯದಲ್ಲಿ ದೇವಾಲಯಗಳ ನಗರಿ ಎಂದೇ ಪ್ರಸಿದ್ಧಿಯಾಗಿತ್ತು. ಕ್ರಿ.ಶ 740ರಲ್ಲಿ ಸ್ಥಾಪನೆಯಾಗಿರುವ ಶ್ರೀವಿರೂಪಾಕ್ಷ ದೇವಾಲಯವು ಈ ನಗರದಲ್ಲಿರುವ ಅತಿದೊಡ್ಡ ದೇವಾಲಯವಾಗಿದೆ. ದೇವಾಲಯದ ಆವರಣದಲ್ಲಿ ಕಪ್ಪು ಕಲ್ಲಿನ ಬೃಹತ್ ನಂದಿ ವಿಗ್ರಹವಿದೆ. ಕಾಡುಸಿದ್ಧೇಶ್ವರ, ಗಳಗನಾಥ, ಪಾಪನಾಥ, ಕಾಶಿವಿಶ್ವೇಶ್ವರ, ಮಲ್ಲಿಕಾರ್ಜುನ ದೇವಾಲಯಗಳಿದ್ದು ದಾಳಿಕೋರರಿಂದ ದಾಳಿಗೊಳಗಾಗಿದ್ದಕ್ಕೆ ಮೂಕ ಸಾಕ್ಷಿಗಳಾಗಿ ನಿಂತಿವೆ.

ಪಟ್ಟದ ಕಲ್ಲಿನ ನಂತರ ನಮ್ಮ ಪ್ರಯಾಣ ಶ್ರೀ ಮಹಾಕೂಟದ ಕಡೆಗೆ ಮುಂದುವರೆಯಿತು. ಶ್ರೀಮಹಾಕೂಟವು ಶೈವರ ಯಾತ್ರಾಸ್ಥಳವಾಗಿದ್ದು ಅಗಸ್ತ್ಯ ಮಹಾಮುನಿಗಳಿಂದ ಸ್ಥಾಪಿತವಾದ ತಪೋಭೂಮಿಯಾಗಿದೆ. ಇಲ್ಲಿನ ಶ್ರೀಮಹಾಕೂಟೇಶ್ವರ ದೇವಾಲಯವು ಕ್ರಿ.ಶ 7ನೇ ಶತಮಾನದ್ದಾಗಿದೆ ದೇವಾಲಯದಲ್ಲಿ ಕೊಳವಿದ್ದು ಇಲ್ಲಿಗೆ ದೇವಾಲಯದ ಹಿಂದಿರುವ ಬೆಟ್ಟಗಳ ಶ್ರೇಣಿಯಿಂದ ನೀರು ಸ್ವಾಭಾವಿಕವಾಗಿ ಹರಿದು ಬರುತ್ತದೆ. ಕೊಳದ ಮುಖ್ಯ ಆಕರ್ಷಣೆ ಎಂದರೆ ಕೊಳದ ಮಧ್ಯಭಾಗದಲ್ಲಿ ಪಂಚಮುಖದ ಶಿವನನ್ನು ಕೆತ್ತಲಾಗಿದೆ. ಮಧ್ಯಾಹ್ನದ ಭೋಜನವನ್ನು ಮಹಾಕೂಟದ ದೇವಾಲಯದಲ್ಲಿ ಮುಗಿಸಿ ಬಾದಾಮಿಯ ಕಡೆ ಪ್ರಯಾಣ ಮುಂದುವರೆಸಿದೆವು.

ಬಾದಾಮಿಯು ಚಾಲುಕ್ಯ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಬಾದಾಮಿಯನ್ನು ವಾತಾಪಿ ಎಂದೂ ಸಹ ಕರೆಯುತ್ತಿದ್ದರು. ಬಾದಾಮಿಯ ಪ್ರಮುಖ ಪ್ರೇಕ್ಷಣೀಯ ಸ್ಥಳವೆಂದರೆ ಗುಹಾಂತರ ದೇವಾಲಯಗಳು. ಎರಡು ಕಲ್ಲಿನ ಬೆಟ್ಟಗಳನ್ನು ಕೊರೆದು ಗುಹಾಂತರ ದೇವಾಲಯಗಳನ್ನು ನಿರ್ಮಿಸಲಾಗಿದೆ. ಇದರಲ್ಲಿ ಶೈವ ಗುಹೆ, ವೈಷ್ಣವ ಗುಹೆಗಳೆರಡು ಹಾಗೂ ಜೈನ ಗುಹೆ ಎಂಬ ನಾಲ್ಕು ಗುಹಾಂತರ ದೇವಾಲಯವನ್ನು ಚಾಲುಕ್ಯ ದೊರೆಗಳು ನಿರ್ಮಿಸಿದ್ದಾರೆ. ಬಾದಾಮಿಯಲ್ಲಿ ಅಗಸ್ತ್ಯ ತೀರ್ಥ ಸರೋವರ, ಭೂತನಾಥ ಗುಡಿ ಸಮೂಹ ಮತ್ತು ಪ್ರಸನ್ನ ವೆಂಟಕದಾಸರ ಕಟ್ಟೆ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ನಮ್ಮ ಪ್ರಯಾಣವನ್ನು ಬನಶಂಕರಿ ದೇವಾಲಯದ ಕಡೆ ಪ್ರಯಾಣವನ್ನು ಮುಂದುವರೆಸಿದೆವು. ನಾವು ಬನಶಂಕರಿಗೆ ಭೇಟಿ ನೀಡಿದ ಸಂದರ್ಭ ಅಲ್ಲಿ ವಾರ್ಷಿಕ ಜಾತ್ರೆಯು ಪ್ರಗತಿಯಲ್ಲಿದ್ದುದರಿಂದ ಬನಶಂಕರಿ ದೇವಾಲಯವು ಭಕ್ತಜನರಿಂದ ಕೂಡಿತ್ತು. ಬನಶಂಕರಿ ದೇವಿಯ ದರ್ಶನ ಮುಗಿಸಿ, ಜಾತ್ರೆಯಲ್ಲಿ ನಮ್ಮ ವಿದ್ಯಾರ್ಥಿಗಳು ಸುತ್ತಾಡಿ, ಹಲವಾರು ಆಟಿಕೆಗಳು, ಉತ್ತರ ಕರ್ನಾಟಕದ ಸಿಹಿತಿನಿಸುಗಳನ್ನು ಕೊಂಡುಕೊಂಡರು. ಬಾದಾಮಿಯ ಬನಶಂಕರಿ ದೇವಾಲಯದ ನಂತರ ರಾತ್ರಿ ಭೋಜನವನ್ನು ಮುಗಿಸಿ ನಮ್ಮ ಪಯಣ ಗೋವಾದ ಕಡೆಗೆ.

ಪ್ರವಾಸದ ಮೂರನೇ ದಿನ ಅಂದರೆ ದಿನಾಂಕ:05.02.2020ರ ಬುಧವಾರ ಬೆಳಿಗ್ಗೆ 6.00 ಘಂಟೆಗೆ ಗೋವಾ ಪಣಜಿಯ ಮಿರಾಮರ್ ಬೀಚ್ ಬಳಿ ಸೇರಿದೆವು. ಗೋವಾ ಕರ್ನಾಟಕ ರಾಜ್ಯದ ಒಂದು ಜಿಲ್ಲೆಯಷ್ಟು ವಿಸ್ತಾರವಿರುವ ಚಿಕ್ಕ ರಾಜ್ಯ. ಗೋವೆಯು ಕನ್ನಡ ರಾಜ ಮನೆತನಗಳಾದ ಕದಂಬ ಹಾಗೂ ಕಲ್ಯಾಣಿ ಚಾಲುಕ್ಯರಿಂದ ಸ್ಥಾಪಿಸಲ್ಪಟ್ಟ ರಾಜ್ಯವಾಗಿದೆ. ಪೋರ್ಚುಗೀಸರ ಆಕ್ರಮಣದಿಂದ ಕನ್ನಡ ರಾಜಮನೆತನಗಳ ಕೊಡುಗೆಗಳೆಲ್ಲ ನಶಿಸಿಹೋಗಿವೆ. ಗೋವಾ ರಾಜ್ಯದ ಪೂರ್ತಿ ಇರುವ ದೇವಾಲಯಗಳು ಇಂಡೋ ಸಾರ್ಸನಿಕ್ ವಾಸ್ತುಶಿಲ್ಪದಿಂದ ಕೂಡಿದೆ. ನಾವು ಮಿರಾಮಿರ್ ಕಡಲ ತೀರದಿಂದ ಹಳೇ ಗೋವಾದಲ್ಲಿರುವ ಉಡುಪಿ ಉಪಹಾರ್ ಅಲ್ಲಿ ವಾಸ್ತವ್ಯ ಹೂಡಿದೆವು. ಅಲ್ಲಿಯೇ ಬೆಳಗಿನ ಉಪಹಾರ ಸೇವಿಸಿ ಅಲ್ಲಿಂದ ಮತ್ತೆ ಮಿರಾಮರ್ ಕಡಲ ತೀರಕ್ಕೆ ತೆರಳಿದೆವು. ಕಡಲ ತೀರದಲ್ಲಿ ಸ್ವಲ್ಪ ಸಮಯ ಕಳೆದು ಅಲ್ಲಿಯೇ ದೋಣಿ ವಿಹಾರಕ್ಕೆ ತೆರಳಿದೆವು. ದೋಣಿ ವಿಹಾರದಲ್ಲಿ ಸಮುದ್ರಲ್ಲಿ ಸ್ವಲ್ಪ ದೂರ ವಿಹರಿಸಿ, ಜೊತೆಗೆ ಅಲ್ಲಿ ಡಾಲ್ಫಿನ್‌ಗಳು, ಹಳೆಯ ಲೈಟ್ ಹೌಸ್, ಆಗ್ವಾಡ ಕೇಂದ್ರೀಯ ಕಾರಾಗೃಹ, ಆಗ್ವಾಡ ಕೋಟೆ, ಓಷಿಯನ್ ಡೆಕ್ ವಿಲ್ಲಾ(ವಜ್ರ ಡಕಾಯಿತನ ಬಂಗಲೆ)ಗಳನ್ನು ಹಾಗೂ ರಾಜ್ಯಪಾಲರ ಮನೆಯನ್ನು ದೂರದಿಂದಲೇ ವೀಕ್ಷಿಸಿದೆವು. ಸಮುದ್ರದ ಕಿನಾರೆಯಿಂದ ನಂತರ ನಮ್ಮ ಪಯಣ ಆಗ್ವಾಡ ಕೋಟೆಯ ಕಡೆಗೆ ಹೊರಟೆವು. ದಾರಿಯುದ್ದಕ್ಕೂ ಹಲವಾರು ಬೀಚ್‌ಗಳು, ಕಡಲ ಕಿನಾರೆಯಲ್ಲಿ ಲಂಗೂರು ಹಾಕಿದ್ದ ಐಷಾರಾಮಿ ಹಡಗುಗಳಲ್ಲಿನ ಹೋಟೇಲ್‌ಗಳು, ಆಕರ್ಷಣೀಯ ರಸ್ತೆಗಳು, ಸೇತುವೆಗಳನ್ನು ನೋಡುತ್ತಾ ಸಾಗಿದೆವು. ನಂತರ ಆಗ್ವಾಡಾ ಕೋಟೆಯನ್ನು ಸುತ್ತಿ ಅಲ್ಲಿಯೇ ಮಧ್ಯಾಹ್ನದ ಊಟವನ್ನು ಮುಗಿಸಿ ಕಾಲಂಗೋಟ್ ಸಮುದ್ರ ಕಿನಾರೆಯತ್ತ ನಮ್ಮ ಪ್ರವಾಸವನ್ನು ಬೆಳೆಸಿದೆವು. ಕಾಲಂಗೋಟ್ ಸಮುದ್ರ ಕಿನಾರೆಯು ಗೋವಾದ ಪ್ರಮುಖ ಬೀಚ್‌ಗಳಲ್ಲಿ ಒಂದು ಅಲ್ಲಿ ವಿದ್ಯಾರ್ಥಿಗಳು ಸಮುದ್ರ ಕಿನಾರೆಯಲ್ಲಿ ಕೆಲವು ಸಮಯ ಕುಣಿದು ಕುಪ್ಪಳಿಸಿದರು. ಸಂಜೆ ಸೂರ್ಯಾಸ್ತಮಾನವನ್ನು ವೀಕ್ಷಿಸಿದ ನಂತರ ಬೀಚ್ ಆಸುಪಾಸಿನಲ್ಲೇ ಹಲವಾರು ವಸ್ತುಗಳನ್ನು ವಿದ್ಯಾರ್ಥಿಗಳು ಶಾಪಿಂಗ್ ಮಾಡಿದರು. ನಂತರ ನಾವು ಉಳಿದುಕೊಂಡಿದ್ದ ಉಡುಪಿ ಉಪಹಾರ್ ವಸತಿ ಗೃಹಕ್ಕೆ ತೆರಳಿ ರಾತ್ರಿ ಊಟ ಮುಗಿಸಿ ವಿಶ್ರಾಂತಿ ಪಡೆದವು.

ಪ್ರವಾಸದ ನಾಲ್ಕನೇ ದಿನ ಅಂದರೆ ದಿನಾಂಕ:06.02.2020ರ ಗುರುವಾರ ಬೆಳಿಗ್ಗೆ ಬೆಳಗಿನ ಉಪಹಾರ ಮುಗಿಸಿ ಹಳೆಯ ಗೋವದಲ್ಲಿರುವ "ಬೆಸಿಲಿಕಾ ಆಫ್ ಬಾಮ್ ಜೀಸಸ್ ಚರ್ಚ್"ಗೆ ಭೇಟಿ ನೀಡಿದೆವು ಚರ್ಚ್ ತುಂಬಾ ಪುರಾತನವಾಗಿದ್ದು ಚರ್ಚ್‌ನ ಮುಖ್ಯಸ್ಥರಾಗಿದ್ದ "ಸೇಂಟ್ ಫ್ರಾನ್ಸಿಸ್ ಸೇ಼ವಿಯರ್" ಅವರ ದೇಹವನ್ನು ಸುಮಾರು 408 ವರ್ಷಗಳಿಂದ ಸಂರಕ್ಷಿಸಿ ಇಡಲಾಗಿದೆ ಮತ್ತು ಚರ್ಚ್‌ನ ವಾಸ್ತುಶಿಲ್ಪ ಅತ್ಯದ್ಭುತವಾಗಿದ್ದು ಸ್ಥಳಿಯವಾಗಿ ಸಿಗುವ ಕೆಂಪು ಜೆಂಬಿಟ್ಟಿಗೆಯಲ್ಲಿಯೇ ನಿರ್ಮಿಸಲಾಗಿದೆ. ಈ ಚರ್ಚ್‌ನ ಒಳಾಂಗಣ ವಾಸ್ತುಶಿಲ್ಪವೂ ಸಹ ಅತ್ಯಾಕರ್ಷವಾಗಿದೆ. ಈ ಚರ್ಚ್ ವೀಕ್ಷಣೆಯ ನಂತರ ಅಲ್ಲಿಯೇ ಇದ್ದ "ಸೇ. ಕೆಥೆಡ್ರಲ್ ಚರ್ಚ್"ಗೆ ಭೇಟಿ ನೀಡಿದೆವು. ನಂತರ ಗೋವಾದ ಪೊಂಡಾದಲ್ಲಿರುವ ಸುಮಾರು 400 ವರ್ಷ ಇತಿಹಾಸವುಳ್ಳ ಮಂಗೇಶಿ ಮಂದಿರಕ್ಕೆ ಭೇಟಿ

ನೀಡಿದೆವು. ಮಂಗೇಶಿ ದೇವಸ್ಥಾನವು ಭವ್ಯವಾದ ದೀಪಮಾಲಾಸ್ಥಂಭ, ಗುಮ್ಮಟ, ಸಭಾ ಮಂಟಪವನ್ನು ಹೊಂದಿದೆ ಹಾಗೂ ಇದು ಶೈವ ಮತ್ತು ನಾಥ ಪಂಥದ ಮುಖ್ಯವಾದ ದೇವಸ್ಥಾನಗಳಲ್ಲೊಂದಾಗಿದೆ. ಈ ದೇವಸ್ಥಾನವು ಪಣಜಿಯಿಂದ ಸುಮಾರು 28 ಕಿ.ಮೀ ದೂರದಲ್ಲಿದೆ. ಇಲ್ಲಿಯೇ ಮಧ್ಯಾಹ್ನದ ಊಟವನ್ನು ಮುಗಿಸಿ ಕಾರವಾರದ ಕಡೆಗೆ ಹೊರಟೆವು.

ಪೋಂಡಾದಿಂದ ಸುಮಾರು 80ಕಿ.ಮೀ ಪ್ರಯಾಣವನ್ನು 3 ಗಂಟೆಗಳ ಕಾಲ ಕ್ರಮಿಸಿ ಸಂಜೆ 5.00 ಗಂಟೆಗೆ ಕರ್ನಾಟಕದ ಕಾರವಾರವನ್ನು ತಲುಪಿದೆವು. ಇಲ್ಲಿನ ರಬೀಂದ್ರನಾಥ ಠ್ಯಾಗೋರ್ ಕಡಲ ಕಿನಾರೆಯಲ್ಲಿ ಸಂಜೆಯ ಸೂರ್ಯಾಸ್ತಮಾನವನ್ನು ವೀಕ್ಷಿಸಿ ಅಲ್ಲಿಯೇ ಸಂಜೆಯ ಚಹಾಕೂಟವನ್ನು ಸವಿದೆವು. ನಂತರ ಅಲ್ಲಿಂದ ನಮ್ಮ ಪಯಣವನ್ನು ಮುರ್ಡೇಶ್ವರದ ಕಡೆಗೆ ಹೊರಟೆವು ಮಾರ್ಗ ಮಧ್ಯೆ ರಾತ್ರಿಯ ಊಟವನ್ನು ಮಾಡಿ ರಾತ್ರಿ 10.30ಕ್ಕೆ ಮುರ್ಡೇಶ್ವರವನ್ನು ತಲುಪಿ ಅಲ್ಲಿಯೇ ವಾಸ್ತವ್ಯವನ್ನು ಹೂಡಿದೆವು.

ಪ್ರವಾಸದ ಐದನೇ ದಿನ ಅಂದರೆ ದಿನಾಂಕ:07.02.2020ರ ಶುಕ್ರವಾರ ಬೆಳಿಗ್ಗೆ ಮುರ್ಡೇಶ್ವರದ ದೇವಸ್ಥಾನಕ್ಕೆ ಭೇಟಿ ನೀಡಿದೆವು ರಾವಣನಿಂದ ಪಂಚ ಶೈವ ಕ್ಷೇತ್ರಗಳಾದ ಗೋಕರ್ಣ, ಸಜ್ಜೇಶ್ವರ, ಧಾರೇಶ್ವರ, ಗುಣವಂತೇಶ್ವರ ಹಾಗೂ ಮುರ್ಡೇಶ್ವರ ಸ್ಥಾಪಿಸಲ್ಪಟ್ಟು ಶ್ರೀ.ಎನ್.ಆರ್.ಶೆಟ್ಟಿಯವರ ದೂರದೃಷ್ಟಿಯಿಂದ ಮುರ್ಡೇಶ್ವರ ಆಧುನಿಕ ರೂಪದಲ್ಲಿ ಜೀರ್ಣೋದ್ಧಾರವಾಗಿದೆ. ಅಲ್ಲಿ 150 ಅಡಿ ಎತ್ತರದ ಶಿವನ ವಿಗ್ರಹ, 250 ಅಡಿ ಎತ್ತರದ ರಾಜಗೋಪುರ, ರಾವಣ ಹಾಗೂ ಗಣೇಶನ ಪುತ್ಥಳಿಗಳು ಆಕರ್ಷಣೀಯವಾಗಿದೆ. ದೇವಾಲಯದ ಸಂಕೀರ್ಣದಲ್ಲಿರುವ ಗಣಪತಿ, ಪಾರ್ವತಿ, ಸುಬ್ರಹ್ಮಣ್ಯ, ದತ್ತಾತ್ರೇಯ, ಆಂಜನೇಯ, ಶನಿದೇವರ ದೇವಾಲಯಗಳಿಗೂ ಸಹ ಭೇಟಿ ನೀಡಿದೆವು. ವಿದ್ಯಾರ್ಥಿಗಳು ಅಲ್ಲಿಯೂ ಸಹ ಕಡಲಿನಲ್ಲಿ ಕೆಲಸಮಯ ಆಟವಾಡಿ ನಂತರ ವಸತಿನಿಲಯಕ್ಕೆ ಆಗಮಿಸಿದರು. ವಸತಿ ನಿಲಯದಲ್ಲಿಯೇ ಬೆಳಗಿನ ಉಪಹಾರವನ್ನು ಸೇವಿಸಿದ ನಂತರ ನಮ್ಮ ಪ್ರಯಾಣವನ್ನು ಕುಂಭಾಶಿಯ ಕಡೆ ಮುಂದುವರೆಸಿದೆವು. ಭಟ್ಕಳ ಮಾರ್ಗವಾಗಿ ಸಾಗಿ ಕುಂದಾಪುರ ಸಮೀಪದ ಕುಂಭಾಶಿಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಚಂಡಿಕಾ ದುರ್ಗಾಪರಮೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿದೆವು. ಮರದಲ್ಲಿ ಕೆತ್ತಿರುವ ಅತ್ಯದ್ಭುತ ವಾಸ್ತುಶಿಲ್ಪವಿರುವ ಗರ್ಭಗುಡಿಯನ್ನು ದೇವಸ್ಥಾನ ಹೊಂದಿದ್ದು ಇಲ್ಲಿಯೇ ಮಧ್ಯಾಹ್ನದ ಊಟವನ್ನು ಮುಗಿಸಿ ನಂತರ ಹತ್ತಿರದಲ್ಲೇ ಇರುವ ಆನೆಗುಡ್ಡೆ ಗಣೇಶ ದೇವಾಲಯಕ್ಕೆ ತೆರಳಿದೆವು. ಗಣೇಶನ ದರ್ಶನ ಪಡೆದು ಅಲ್ಲಿಯೇ ಪ್ರಾಂಗಣದಲ್ಲಿರುವ ಶ್ರೀಹರಿಹರೇಶ್ವರ ಹಾಗೂ ಶ್ರೀಅಯ್ಯಪ್ಪಸ್ವಾಮಿ ದೇವಾಲಯಗಳಿಗೂ ಸಹ ಭೇಟಿ ನೀಡಿದೆವು. ಅಲ್ಲಿಂದ ಮುಂದೆ ನಮ್ಮ ಪ್ರಯಾಣ ಉಡುಪಿಯ ಕಡೆಗೆ ಹೊರಟು ಉಡುಪಿಯ ಹತ್ತಿರದ ಕಡಲ ಕಿನಾರೆ ಮಲ್ಪೆಗೆ 4.30ಗಂಟೆಗೆ ತಲುಪಿದೆವು. ಸಮುದ್ರದ ದಂಡೆಯಲ್ಲಿಯೇ ಕೆಲ ಸಮಯ ವಿಶ್ರಮಿಸಿ ಕಿನಾರೆಯಲ್ಲಿ ಆಟವಾಡಿ ಸೂರ್ಯಾಸ್ತಮಾನವನ್ನು ವೀಕ್ಷಿಸಿದ ತರುವಾಯ ಅಲ್ಲಿಂದ ಉಡುಪಿಯ ಶ್ರೀಕೃಷ್ಣ ಮಠಕ್ಕೆ ಭೇಟಿ ನೀಡಿದೆವು. ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಶ್ರೀಮನ್ ಮಧ್ವಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶ್ರೀ ಕಡೆಗೋಲು ಕೃಷ್ಣ ಹಾಗೂ ಕನಕನ ಕಿಂಡಿಯ ದರ್ಶನವನ್ನು ಪಡೆದು ಅಲ್ಲಿಯೇ ರಾತ್ರಿಯ ಊಟವನ್ನು ಮುಗಿಸಿದ ನಂತರ ನಮ್ಮ ಪ್ರಯಾಣ ಮೈಸೂರು ಕಡೆಗೆ. ರಾತ್ರಿ 10.30ಕ್ಕೆ ಉಡುಪಿಯಿಂದ ಹೊರಟು ಮರುದಿನ ಬೆಳಿಗ್ಗೆ 6.30 ಗಂಟೆಗೆ ಕಾಲೇಜಿಗೆ ತಲುಪಿದೆವು.

ಶೈಕ್ಷಣಿಕ ಪ್ರವಾಸದಲ್ಲಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ತಂಡವು ಹಲವಾರು ವಿಷಯಗಳನ್ನು ತಿಳಿದುಕೊಂಡಿದ್ದು ಶೈಕ್ಷಣಿಕ ಪ್ರವಾಸವು ನಮ್ಮಲ್ಲಿ ಚಿರಸ್ಥಾಯಿಯಾಗಿ ಉಳಿದುಕೊಂಡಿದೆ. ವಿದ್ಯಾರ್ಥಿಗಳು ಸಹ ಎಲ್ಲಿಯೂ ನಮ್ಮ ಮಾತನ್ನು ಅಗೌರವಿಸದೇ ಹೇಳಿದಂತೆ ಕೇಳಿ ಪ್ರವಾಸದ ಉದ್ದಕ್ಕೂ ಸಂತೋಷವಾಗಿ ಕಾಲಕಳೆದಿದ್ದು ನಮಗೆ ಸಂತಸವನ್ನು ತಂದಿರುತ್ತದೆ. ಇಂತಹ ಶೈಕ್ಷಣಿಕ ಪ್ರವಾಸಗಳು ಮನುಷ್ಯನ ಬೌದ್ಧಿಕ ವಿಕಸನಕ್ಕೆ ಕಾರಣವಾಗಿರುತ್ತದೆ. ಈ ಪ್ರವಾಸವನ್ನು ಕೈಗೊಳ್ಳಲು ಅನುವು ಮಾಡಿಕೊಟ್ಟ ಕಾಲೇಜಿನ ಪ್ರಾಂಶುಪಾಲರಿಗೆ ಹಾಗೂ ಆಡಳಿತ ಮಂಡಳಿಗೆ ಧನ್ಯವಾದವನ್ನು ಅರ್ಪಿಸುತ್ತಿದ್ದೇವೆ.


2020.02.04 13:51




ತುಂಗಭದ್ರಾ ಮಂಡಳಿ, ಟಿ.ಬಿ.ಡ್ಯಾಂ
ತುಂಗಭದ್ರಾ ಜಲಾಶಯದ ವಿವರಗಳು





